# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ.14141/2008

| | |
|---|---|
| ಸಾಕ್ಷಿದಾರರ ಹೆಸರು : | ಎಸ್.ಕೆ. ಉಮೇಶ |
| ತಂದೆಯ ಹೆಸರು : | ಲೇಟ್. ಎಸ್. ಕರಿಯಪ್ಪ |
| ವಯಸ್ಸು : | 65 ವರ್ಷ |
| ಉದ್ಯೋಗ : | ನಿವೃತ್ತ ಎಸ್.ಪಿ. |
| ವಾಸ : | ಜಿ.ಪಿ. ನಗರ, ಬೆಂಗಳೂರು. |

**ದಿನಾಂಕ 06/03/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು ದಿನಾಂಕ 28/01/2002 ರಿಂದ 24/06/2003 ರವರೆಗೆ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 02/08/2002 ರಂದು ನಾನು ಠಾಣೆಯಲ್ಲಿರುವಾಗ ಬೆಳಿಗ್ಗೆ ಚಾಸಾ-1 ರವರು ಮದ್ಯಾಹ್ನ 01.00 ಗಂಟೆಯ ಸಮಯದಲ್ಲಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿ ಪ್ರ.ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ರವಾನಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಚಾಸಾ-1 ರವರು ಕರೆದುಕೊಂಡು ಹೋಗಿದ್ದು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಗೆ ಪಂಚರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಅದೇ ಚಾಸಾ-2 ಮತ್ತು 3 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

3. ಈ ಪ್ರಕರಣದ ಆರೋಪಿತರನ್ನು ಪತ್ತೆ ಹಚ್ಚಿ ಹಿಡಿದು ತರುವಂತೆ ಸಿಬ್ಬಂದಿಗಳಾದ ಚಾಸಾ-17 ರಿಂದ 22 ರವರಿಗೆ ಮೌಖಿಕವಾಗಿ ಸೂಚಿಸಿರುತ್ತೇನೆ. ಅದರಂತೆ ದಿನಾಂಕ 06/08/2002 ರಂದು ಸದರಿ ಚಾಸಾ-17 ರಿಂದ 22 ರವರು ಈ ಪ್ರಕರಣದ 6 ಜನ ಆರೋಪಿತರನ್ನು ಹಿಡಿದುಕೊಂಡು ಬಂದು ಮದ್ಯಾಹ್ನ 01.00 ಗಂಟೆಗೆ ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಸದರಿ 6 ಜನ ಆರೋಪಿತರ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ, ಅವರ ಸ್ವಇಚ್ಛಾ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

4. ಅದೇ ದಿನ 2ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ, 2ನೇ ಆರೋಪಿಯೇ ಕರೆದುಕೊಂಡು ಹೋದಂತೆ, ಪುಟ್ಟೇನಪಾಳ್ಯ, ಜಾಯನಗರ 9 ನೇ ಬ್ಲಾಕ್ ನಲ್ಲಿರುವ 2ನೇ ಆರೋಪಿಯ ಮನೆಗೆ ನಾನು , ಸಿಬ್ಬಂದಿಗಳು ಹಾಗೂ ಪಂಚರಾದ ಚಾಸಾ-7 ಮತ್ತು 8 ರವರೊಂದಿಗೆ ಹೋಗಿರುತ್ತೇನೆ. ಸದರಿ ಮನೆಯಲ್ಲಿ 2ನೇ ಆರೋಪಿಯು ಬಚ್ಚಿಟ್ಟಿದ್ದ ನಕಲಿ ಮಾರ್ಕ್ಸ್‌ಕಾರ್ಡ ಮತ್ತು ಸರ್ಟಿಫಿಕೇಟ್ ಗಳನ್ನು ಹಾಜರು ಪಡಿಸಿರುತ್ತಾನೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ 8 ಬಿ.ಕಾಮ್ ಸರ್ಟಿಫಿಕೇಟ್ ಗಳು, 2 ಬ್ಯಾಚುಲರ್ ಆಫ್ ಹೋಟೆಲ್ ಮ್ಯಾನೇಜಮೆಂಟ್ ಸರ್ಟಿಫಿಕೇಟ್ ಗಳು, 1 ಬ್ಯಾಚುಲರ್ ಆಫ್ ಇಂಜಿನೀಯರಿಂಗ್ ಸರ್ಟಿಫಿಕೇಟ್, 2 ಬ್ಯಾಚುಲರ್ ಆಫ್ ಫಾರ್ಮಸಿ ಸರ್ಟಿಫಿಕೇಟ್ ಗಳು, 22 ಬಿ.ಇ. ಮಾರ್ಕ್ಸ್‌ಕಾರ್ಡ ಗಳು, 6 ಬಿ.ಕಾಮ್ ಮಾರ್ಕ್ಸ್‌ಕಾರ್ಡ ಗಳು, 2 ಮಾಸ್ಟರ್ ಆಫ್ ಕಂಪ್ಯೂಟರ್ ಮಾರ್ಕ್ಸ ಕಾರ್ಡ ಗಳು, ಒಂದು ಮೊಬೈಲ್ ಫೋನ್ ಮತ್ತು ರೂ.30,000/- ನಗದು ಹಣ ಇದ್ದವು. ಸದರಿ ದಾಖಲೆಗಳನ್ನು ಮತ್ತು ಹಣವನ್ನು ಸದರಿ ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯ ಅಡಿಯಲ್ಲಿ ರಾತ್ರಿ 10.15 ರಿಂದ 11.30 ಗಂಟೆಯವರೆಗೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ.

5. ಅದೇ ದಿನ 8ನೇ ಆರೋಪಿಯಾದ ರಮೇಶ ಈತನ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ, 8ನೇ ಆರೋಪಿಯೇ ಕರೆದುಕೊಂಡು ಹೋದಂತೆ, ಪುಟ್ಟೇನಪಾಳ್ಯ,

ಜಾಯನಗರ 9 ನೇ ಬ್ಲಾಕ್ ನಲ್ಲಿರುವ 8ನೇ ಆರೋಪಿಯ ಮನೆಗೆ ನಾನು , ಸಿಬ್ಬಂದಿಗಳು ಹಾಗೂ ಪಂಚರಾದ ಚಾಸಾ-7 ಮತ್ತು 8 ರವರೊಂದಿಗೆ ಹೋಗಿರುತ್ತೇನೆ. ಸದರಿ ಮನೆಯಲ್ಲಿ 8ನೇ ಆರೋಪಿಯು ಬಚ್ಚಿಟ್ಟಿದ್ದ ನಕಲಿ ಮಾರ್ಕ್ಸ್‌ಕಾರ್ಡ್ ಮತ್ತು ಸರ್ಟಿಫಿಕೇಟ್ ಗಳನ್ನು ಹಾಜರು ಪಡಿಸಿರುತ್ತಾನೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ 95 ಬಿ.ಎಸ್.ಸಿ ಖಾಲಿ ಮಾರ್ಕ್ಸ್‌ಕಾರ್ಡಗಳು, 60 ಬಿ.ಕಾಮ್ ಖಾಲಿ ಮಾರ್ಕ್ಸ್‌ಕಾರ್ಡಗಳು, 30 ಬಿ.ಎ. ಖಾಲಿ ಮಾರ್ಕ್ಸ್‌ಕಾರ್ಡಗಳು, 90 ಖಾಲಿ ಡಿಪ್ಲೋಮಾ ಮಾರ್ಕ್ಸ್‌ಕಾರ್ಡಗಳು, 10 ಬಿ.ಎಸ್.ಸಿ ಖಾಲಿ ಸರ್ಟಿಫಿಕೇಟ್ ಗಳನ್ನು 8 ನೇ ಆರೋಪಿಯು ಹಾಜರು ಪಡಿಸಿದ ಮೇರೆಗೆ ಸದರಿ ದಾಖಲೆಗಳನ್ನು ಸದರಿ ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯ ಅಡಿಯಲ್ಲಿ ರಾತ್ರಿ 11.45 ರಿಂದ 12.15 ಗಂಟೆಯವರೆಗೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ.

6. ದಿನಾಂಕ 07/08/2002 ರಂದು 5ನೇ ಆರೋಪಿಯಾದ ತಂಗರಾಜು ಈತನ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ, 5ನೇ ಆರೋಪಿಯೇ ಕರೆದುಕೊಂಡು ಹೋದಂತೆ ಮಾರತಹಳ್ಳಿಯ ಮನೆ ನಂ.41 ಅಶ್ವಥ ನಗರದ ಮನೆಗೆ 5ನೇ ಆರೋಪಿಯ ಮನೆಗೆ ನಾನು , ಸಿಬ್ಬಂದಿಗಳು ಹಾಗೂ ಪಂಚರಾದ ಚಾಸಾ-7 ಮತ್ತು 8 ರವರೊಂದಿಗೆ ಹೋಗಿರುತ್ತೇನೆ. ಸದರಿ ಮನೆಯಲ್ಲಿ 5ನೇ ಆರೋಪಿಯು ಬಚ್ಚಿಟ್ಟಿದ್ದ ನಕಲಿ ಮಾರ್ಕ್ಸ್‌ಕಾರ್ಡ್ ಮತ್ತು ಸರ್ಟಿಫಿಕೇಟ್ ಗಳನ್ನು ಹಾಜರು ಪಡಿಸಿರುತ್ತಾನೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ 1 ಬ್ಯಾಚುಲರ್ ಆಫ್ ಹೋಟೆಲ್ ಮ್ಯಾನೇಜಮೆಂಟ್ ಸರ್ಟಿಫಿಕೇಟ್, 10 ಬಿ.ಕಾಮ್ ಸರ್ಟಿಫಿಕೇಟ್, 10 ಬಿ.ಎ. ಮಾರ್ಕ್ಸ್‌ಕಾರ್ಡ್, 10 ಎಲ್.ಎಲ್.ಬಿ ಮಾರ್ಕಕಾರ್ಡ ಗಳು, 80 ಪಿ.ಯು.ಸಿ ಮಾರ್ಕ್ಸ್‌ಕಾರ್ಡಗಳು, 8 ಬಿ.ಡಿ.ಎಸ್. ಮಾರ್ಕ್ಸ್‌ಕಾರ್ಡಗಳು 5 ನೇ ಆರೋಪಿಯು ಹಾಜರು ಪಡಿಸಿದ ಮೇರೆಗೆ ಸದರಿ ದಾಖಲೆಗಳನ್ನು ಸದರಿ ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯ

ಅಡಿಯಲ್ಲಿ ಬೆಳಿಗ್ಗೆ 07.10 ರಿಂದ 07.30 ಗಂಟೆಯವರೆಗೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ.

7. ಅದೇ ದಿನ 3ನೇ ಆರೋಪಿಯಾದ ಶ್ರೀನಿವಾಸ ಈತನ ಸ್ವಇಚ್ಛಾ ಹೇಳಿಕೆಯ ಆಧಾರದ ಮೇಲೆ, 3ನೇ ಆರೋಪಿಯೇ ಕರೆದುಕೊಂಡು ಹೋದಂತೆ, ಸುಬ್ರಮಣ್ಯಪುರದ 3ನೇ ಆರೋಪಿಯ ಮನೆಗೆ ನಾನು, ಸಿಬ್ಬಂದಿಗಳು ಹಾಗೂ ಪಂಚರಾದ ಚಾಸಾ-6 ಮತ್ತು 7 ರವರೊಂದಿಗೆ ಹೋಗಿರುತ್ತೇನೆ. ಸದರಿ ಮನೆಯಲ್ಲಿ 3ನೇ ಆರೋಪಿಯು ಬಚ್ಚಿಟ್ಟಿದ್ದ ನಕಲಿ ಮಾರ್ಕ್ಸ್‌ಕಾರ್ಡ್ ಮತ್ತು ಸರ್ಟಿಫಿಕೇಟ್ ಗಳನ್ನು ಹಾಜರು ಪಡಿಸಿರುತ್ತಾನೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ 6 ಬಿ.ಎ. ಸರ್ಟಿಫಿಕೇಟ್ ಗಳು, 50 ಡಿಪ್ಲೋಮಾ ಸರ್ಟಿಫಿಕೇಟ್ ಗಳು, 3 ಎಮ್.ಬಿ.ಎ ಸರ್ಟಿಫಿಕೇಟ್ ಗಳು, 62 ಬಿ.ಎಸ್.ಸಿ ಮಾರ್ಕ್ಸ್‌ಕಾರ್ಡ್ ಗಳು, 85 ಬಿ.ಕಾಮ್ ಮಾರ್ಕ್ಸ್‌ಕಾರ್ಡ್‌ಗಳು, 40 ಬಿ.ಇ. ಮಾರ್ಕ್ಸ್‌ಕಾರ್ಡ್‌ಗಳನ್ನು 3 ನೇ ಆರೋಪಿಯು ಹಾಜರು ಪಡಿಸಿದ ಮೇರೆಗೆ ಸದರಿ ದಾಖಲೆಗಳನ್ನು ಸದರಿ ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯ ಅಡಿಯಲ್ಲಿ 10.10 ರಿಂದ 11.00 ಗಂಟೆಯವರೆಗೆ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಎಲ್ಲ ದಾಖಲೆಗಳನ್ನು , ಮೊಬೈಲ್ ಮತ್ತು ನಗದು ಹಣವನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಸದರಿ ಚಾಸಾ-6 ರಿಂದ 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ-17 ರಿಂದ 22 ರವರ ಹೇಳಿಕೆಗಳನ್ನು ದಾಖಲಿಸಿಕೂಂಡಿರುತ್ತೇನೆ.

8. ನಂತರ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ 3 ದಿನಗಳ ಕಾಲ ಪೊಲೀಸ್ ಬಂಧನಕ್ಕೆ ಪಡೆದುಕೊಂಡಿರುತ್ತೇನೆ. ನಂತರ ದಿನಾಂಕ 09/08/2002 ರಂದು ಸದರಿ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿನಾಂಕ 21/11/2002 ರಂದು ಅಮಾನತ್ತು ಪಡಿಸಿಕೊಂಡ

ದಾಖಲೆಗಳನ್ನು ಬೆಂಗಳೂರು ಯುನಿವರ್ಸಿಟಿಗೆ ಕಳಿಸಿ, ಅವುಗಳ ನೈಜತೆಯ ಬಗ್ಗೆ ವರದಿ ಕೊಡುವಂತೆ ಕೇಳಿರುತ್ತೇನೆ. ಅವುಗಳನ್ನು ಪರಿಶೀಲಿಸಿ ದಿನಾಂಕ 21/12/2002 ರಂದು ಬೆಂಗಳೂರು ಯುನಿವರ್ಸಿಟಿಯ ಕುಲಸಚಿವರು ವರದಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ಅಮಾನತ್ತು ಪಡಿಸಿಕೊಂಡ ಎಲ್ಲ ಮಾರ್ಕ್‌ಕಾರ್ಡ್‌ಗಳು ಮತ್ತು ಸರ್ಟಿಫಿಕೇಟ್ ಗಳು ನಮ್ಮ ಯನಿವರ್ಸಿಟಿಯಿಂದ ಅಥವಾ ಬೆಂಗಳೂರು ವಿಶ್ವವಿದ್ಯಾಲಯಿಂದ ಕೊಟ್ಟಿರುವಂತಹ ದಾಖಲೆಗಳಲ್ಲ ಎಂದು ನಮೂದಿಸಿರುತ್ತಾರೆ. ಅದೇ ರೀತಿ ತಾಂತ್ರಿಕ ಶಿಕ್ಷಣ ಇಲಾಖೆಗೆ ದಾಖಲೆಗಳನ್ನು ಕಳಿಸಿ ಅವುಗಳ ನೈಜತೆಯ ಬಗ್ಗೆ ವರದಿ ನೀಡುವಂತೆ ಪತ್ರ ಬರೆದಿರುತ್ತೇನೆ. ಸದರಿ ವರದಿಯಲ್ಲಿ ಸದರಿ ದಾಖಲೆಗಳು ಅವರ ಇಲಾಖೆಯಿಂದ ಕೊಟ್ಟ ದಾಖಲೆಗಳಲ್ಲ ಎಂದು ವರದಿ ನೀಡಿರುತ್ತಾರೆ. ತನಿಖೆ ಪೂರ್ಣಗೊಂಡಿದ್ದರಿಂದ 4, 6, 7, 10 ಮತ್ತು 11 ರವರ ಪತ್ರ ಮೇಲ್ನೋಟಕ್ಕೆ ಕಂಡು ಬರದ ಕಾರಣ ಉಳಿದ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

**ಸಾಕ್ಷಿಯ ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)

ಮು.ಮ.ದಂ.ನ್ಯಾ.ಬೆಂ.ನಗರ.